ತುಮಕೂರಿನಲ್ಲಿ ಯುವಜನ ಸೇವಾ ನಿಲಯ

೧೪೫೯ (೨೨೬೮) ಶ್ರೀ ಶಫಿ ಅಹಮದ್ (ತುಮಕೂರು):- ಮಾನ್ಯ ಯುವಜನ ಸೇವಾ, ಕ್ರೀಡಾ, ಮತ್ತು ಕನ್ನಡ ಹಾಗೂ ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ತುಮಕೂರಿನಲ್ಲಿ ಯುವಜನ ಸೇವಾ ನಿಲಯ ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ, ಯಾವ ದಿನಾಂಕದಿಂದ ಪ್ರಾರಂಭಿಸಲಾಗುವುದು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಮತ್ತು ಕನ್ನಡ ಹಾಗೂ ಸಂಸ್ಕೃತಿ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ ೧೯೯೧-೯೨ ಸಾಲಿನಲ್ಲಿ ಕಾಮಗಾರಿಗೆ ಮಂಜೂರಾದ ಹಣ

೧೪೬೦ (೧೦೧೩) ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಚಿಕ್ಕಮಗಳೂರು ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ ೧೯೯೧-೯೨ನೇ ಸಾಲಿಗೆ ಎಷ್ಟು ಕಾಮಗಾರಿಗಳು ಮಂಜೂರಾಗಿವೆ? (ತಾಲ್ಲೂಕುವಾರು ವಿವರಣೆ ಕೊಡುವುದು)

ಆ) ಈ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ೧೯೯೧-೯೨ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಂಜೂರಾದ ಕಾಮಗಾರಿಗಳು.

ಕ್ರಮ ಸಂಖ್ಯೆ	ತಾಲ್ಲೂಕು	ಸಣ್ಣ ನೀರಾವರಿ ವಿಭಾಗ ಕಾಮಗಾರಿಗಳು	ಕಾವೇರಿ ಜಲಾನಯನ ಪತ ನೀರಾವರಿ ನಿಗಮ ಕಾಮಗಾರಿಗಳು	ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದ ಕಾಮಗಾರಿಗಳು
೧.	ಚಿಕ್ಕಮಗಳೂರು	೧೩	೧	೧೭
೨.	ಕಡೂರು	೨೨	೬	೧೨
೩.	ಮೂಡಿಗೆರೆ	—	—	೧೮
೪.	ಕೊಪ್ಪ	—	—	೨೫
೫.	ನರಸಿಂಹರಾಜಪುರ	—	—	೧೪

೬.	ಶೃಂಗೇರಿ	—	—	೩
೭.	ತರೀಕೆರೆ	೧	—	೧೩
	ಒಟ್ಟು	೩೬	೭	೧೦೨

ಆ) ಕಾಮಗಾರಿಗಳ ಒಟ್ಟು ಅಂದಾಜು ವೆಚ್ಚ

೧. ಸಣ್ಣ ನೀರಾವರಿ ವಿಭಾಗ - ರೂ. ೧೨.೬೦೭ ಲಕ್ಷ

೨. ಕಾವೇರಿ ಜಲಾನಯನ ಪಿತ ನೀರಾವರಿ ನಿಗಮ - ರೂ. ೧೮೬.೨೫ ಲಕ್ಷ

೩. ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ - ರೂ. ೨೫೮.೦೧ ಲಕ್ಷ.

ಕೊಡಗು ಜಿಲ್ಲೆಯಲ್ಲಿರುವ ಕೆರೆಗಳ ಸಂಖ್ಯೆ

೧೪೪೩ (೧೧೨೬) ಶ್ರೀಮತಿ ಸುಮಾ ವಸಂತ್ (ಸೋಮವಾರಪೇಟೆ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಒಡ್ಡು, ನಾಲೆ ಮತ್ತು ಕೆರೆಗಳಿವೆ? (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು).

ಆ) ಇವು ಜಿಲ್ಲಾ ಪರಿಷತ್ ಆಡಳಿತಕ್ಕೆ ಒಳಪಟ್ಟಿವೆಯೇ? ಅಥವಾ ನೀರಾವರಿ ವಿಭಾಗಕ್ಕೆ ಒಳಪಟ್ಟಿದೆಯೇ?

ಇ) ಇದಕ್ಕಾಗಿ ೧೯೯೯-೨೦, ೨೯೭೦-೭೧, ೨೯೭೧-೭೨ನೇ ಸಾಲುಗಳಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು? (ತಾಲ್ಲೂಕುವಾರು ಮಾಹಿತಿಯನ್ನೊದಗಿಸುವುದು)

ಶ್ರೀ ಕೆ. ಎಸ್ ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ)

ಕ್ರಮ ಸಂಖ್ಯೆ	ತಾಲ್ಲೂಕು	ಒಡ್ಡು	ನಾಲೆ	ಕೆರೆಗಳು
೧.	ಮಡಿಕೇರಿ	—	೭೪	೫೮
೨.	ಸೋಮವಾರಪೇಟೆ	—	೩೯	೩೬೦
೩.	ವಿರಾಜಪೇಟೆ	—	೬೯	೩೦೦

ಆ) ೫ ಕಾಮಗಾರಿಗಳು ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಮತ್ತು ೨೯೫ ಕಾಮಗಾರಿಗಳು ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ.

ಇ) ೧೯೯೯-೨೦, ೨೯೭೦-೭೧ ಮತ್ತು ೨೯೭೧-೭೨ನೇ ಸಾಲುಗಳಲ್ಲಿ ಬಿಡುಗಡೆ ಮಾಡಿದ ಅನುದಾನ - ತಾಲ್ಲೂಕುವಾರು ವಿವರ